**ದಿನಾಂಕಃ 14.07.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ವೈ. ವಕೀಲರಿಂದಃ–**

1. ಚಿತ್ತಮ್ಮ ಎನ್ನುವವರು ಕರಿಯಪ್ಪ ಮತ್ತು ಚಿತ್ತಪ್ಪನವರ ಮೇಲೆ ದಾರಿ ವಿಚಾರಕ್ಕಾಗಿ ಈ ದಾವೆ ಹೂಡಿದ್ದಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ನನ್ನ ಪರವಾಗಿ ಮಾತ್ರ ಮುಖ್ಯ ವಿಚಾರಣೆ ಸಲ್ಲಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳ ಮೂಲ ಪುರುಷನ ಹೆಸರು ಬಾದಗರಿಯಪ್ಪ. ಬಾದಗರಿಯಪ್ಪನಿಗೆ ನಾಲ್ಕು ಜನ ಮಕ್ಕಳು. ಅವರುಗಳೆಂದರೆ, ಸಣ್ಣಚಿತ್ತಪ್ಪ, ಕರಿಯಪ್ಪ, ಕರೆಚಿತ್ತಪ್ಪ ಮತ್ತು ಸಣ್ಣಕರಿಯಪ್ಪ. ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

2. ಯಾವ ಯಾವ ಸ್ವತ್ತುಗಳ ಮೇಲೆ ಈ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ಃ81 ಮೊದಲು ಒಟ್ಟು 21 ಎಕರೆ ಇತ್ತು. ಸದರಿ ಸರ್ವೆ ನಂಬರ್ಃ81 ನಾಲ್ಕು ಪೋಡಾಗಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 3 ನೇ ಪ್ಯಾರಾದಲ್ಲಿ ಇರುವ ವಿಚಾರಗಳು ನನಗೆ ಗೊತ್ತು. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

3. ಸರ್ವೆ ನಂಬರ್ಃ 81/2 ರ ಜಮೀನಿನ ದಕ್ಷಿಣಕ್ಕೆ ನಾನು ಖರೀದಿಸಿರುವ ಸರ್ವೆ ನಂಬರ್ಃ81/3 ರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ಃ81/3 ರ ದಕ್ಷಿಣಕ್ಕೆ ಸರ್ವೆ ನಂಬರ್ಃ81/4 ರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಓಡಾಡಲು ಬಂಡೀದಾರಿ ಇದೆ ಎಂದರೆ ಸಾಕ್ಷಿಯು ಹೊರಗಡೆ ಇದೆ ಎಂದು ನುಡಿಯುತ್ತಾರೆ. ಪೂರ್ವದಿಂದ ಪಶ್ಚಿಮಕ್ಕೆ ಸಾಗಿ ಮೂರು ಕವಲುಗಳಾಗಿ ಸದರಿ ಬಂಡೀದಾರಿ ಒಡೆಯುತ್ತದೆ ಎಂದರೆ ಸರಿಯಲ್ಲ.

4. ನಾನು ಖರಿದಿ ಮಾಡುವ ಕಾಲಕ್ಕೆ ಸದರಿ ದಾವೆ ಇರುವ ವಿಚಾರ ನನಗೆ ಗೊತ್ತಿರಲಿಲ್ಲ. ನಾನು ದಾವಾ ಷೆಡ್ಯೂಲ್ ಬಿ ಐಟಂ ನಂಃ3 ರ ಸ್ವತ್ತನ್ನು ಈ ದಾವೆ ಹಾಕಿದ ನಂತರ ಖರೀದಿಸಿರುತ್ತೇನೆ

ಎಂದರೆ ಸರಿಯಲ್ಲ. 2 ನೇ ಪ್ರತಿವಾಯಿಂದ ಸದರಿ ಜಮೀನನ್ನು ಖರೀದಿಸಿರುತ್ತೇನೆ. ಸದರಿ ಜಮೀನು 2 ನೇ ಪ್ರತಿವಾದಿಗೆ ಕ್ರಯದ ಮೂಲಕ ಬಂದಿರುತ್ತದೆ. ಸದರಿ ದಾವಾ ಐಟಂ ನಂಃ3 ರ ಸ್ವತ್ತು 2 ನೇ ಪ್ರತಿವಾದಿಗೆ ಪಾಲುವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿ. ನಿಪಿ–28 ರ ಪ್ರಕಾರ ದಾವಾ ಸ್ವತ್ತಿನ ಸುತ್ತಲೂ ದಾರಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ–ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.